

ಕೇರಳದ ಪಾಲಾ ಮೂಲದ ಅನಘ ಜೆ. ಕೋಲತ್ತ್ (ಜನನ: 1994) ಕವಯಿತ್ರಿಯಾಗಿ ಗುರ್ತಿಸಿಕೊಂಡವರು. ಸಾಮಾಜಿಕ ಕಾರ್ಯಕರ್ತೆಯೂ ಆಗಿರುವುದರಿಂದ ವೈಚಾರಿಕತೆಯತ್ತ ಚೂರು ಹೆಚ್ಚೇ ಒಲವು. 'ಕದಕ್ಕೂಟ್ಟ್', 'ಅಂಕಣಂ ಕವಿತಕಳ್' ಮತ್ತು 'ಇಞಾನ್ ಅರಿಞ ಕಡಲ್' ಅವರ ಕವನ ಸಂಕಲನಗಳು. 'ಮೆಳುಕುತಿರಿಕ್ಕ್, ಸ್ವಂತಮ್ ತೀಪ್ಪೆಟ್ಟಿ' ಕವನ ಸಂಕಲನದಲ್ಲಿ ಮೊಂಬತ್ತಿ ಮತ್ತು ಬೆಂಕಿಕಡ್ಡಿಯ ನಡುವಿನ ಕಾಲ್ಪನಿಕ ಸಂಬಂಧದ ಕುರಿತ ಕವನಗಳಿದ್ದು, ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಪಡೆದಿದೆ.

ಅದು ಬಹಳ ನಿಧಾನಗತಿಯಲ್ಲಿ. ನನಗೆ ಈ ಶತಮಾನದ ಬಗ್ಗೆ ಬಹಳ ಭಯವಿದೆ. ಅದು ಮತ್ತೆ ಹಳೆಯದನ್ನೇ ಮರುಕಳಿಸುತ್ತದೆ ಮತ್ತು ಈಗಿನ ಕ್ರಾಂತಿಗಳ ಪರಿಣಾಮದ ರೂಪದಲ್ಲಿ ಮುಂದಿನ ಶತಮಾನವಿರುತ್ತದೆ. ಎಲ್ಲ ಹೋರಾಟಗಳು ಸರಳ ಮತ್ತು ಕ್ಷುಲ್ಲಕವೆನಿಸುವ ವಿಚಾರಗಳಿಂದ ಶುರುವಾಗುತ್ತವೆ. 20ನೇ ಶತಮಾನದಲ್ಲಿದ್ದಂತೆಯೇ ಈಗಲೂ ಅವಕಾಶಗಳು, ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಆತಂಕಗಳಿವೆ.

ನಮ್ಮ ಹಿರಿಯ ತಲೆಮಾರಿನ ಲೇಖಕಿಯರು ಎದುರಿಸಿದ ಸವಾಲುಗಳು ಗಂಭೀರವಾದವು. 'ಸರಸ್ವತಿ ಸಮ್ಮಾನ್' ಪುರಸ್ಕೃತ ಲೇಖಕಿ ಸುಗತಕುಮಾರಿ ಅವರು ತಮ್ಮ ಆರಂಭಿಕ ಬರಹಗಳನ್ನು ಗುಪ್ತನಾಮದಲ್ಲಿ ಪ್ರಕಟಿಸಬೇಕಾಯಿತು. ಅದು ಇಪ್ಪತ್ತನೇ ಶತಮಾನದ ಪರಿಸ್ಥಿತಿ. ಈಗ ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಆದರೆ ಇಂದಿಗೂ ಬರವಣಿಗೆಗೆ ಸಮಯ ಹೊಂದಿಸಿಕೊಳ್ಳುವುದೇ ಭಾರತೀಯ ಮಹಿಳೆಗೊಂದು ದೊಡ್ಡ ಸವಾಲು. ಮಹಿಳೆಯರು ಸೃಜನಶೀಲ ಅಭಿವ್ಯಕ್ತಿಗಿಂತ ತಮ್ಮ ಕರ್ತವ್ಯಗಳಿಗೆ ಆದ್ಯತೆ ಕೊಡುತ್ತಾರೆ. ನಿಧಾನವಾಗಿ ಅವರು, 'ಬರವಣಿಗೆ ಎಂಬುದು ಅಷ್ಟೇನೂ ಮುಖ್ಯವಲ್ಲ' ಎಂದು ಭಾವಿಸುತ್ತಾರೆ ಎಂಬುದೇ ಒಂದು ಗಡಿರೇಖೆಯಿದ್ದಂತೆ. ನಮ್ಮ ಸಮಾಜದಲ್ಲಿ ಎಷ್ಟೋ ಬರಹಗಾರರು ಮೌನವಾಗಿ ಮಾತನಾಡುತ್ತಾರೆ. ಕೆಲವರದ್ದು ನಿರರ್ಗಳ ಮೌನ. ಅಲೈಸ್ ವಾಕರ್ ಹೇಳುವಂತೆ, **In the Search for Mothers' Garden or Grandmothers' Garden, I have found my own. This age is of transformations. That's a poetic justice, I think**

**4** ನನ್ನ ಅಮ್ಮನ ತವರು ಮನೆಯ ಅಜ್ಜ 1986ರಲ್ಲಿ 'ಕೈರಳಿ ಶ್ಲೋಕರಂಗಂ' ಎಂಬ ಒಂದು ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದರು. ನಮಗೆ ಅಕ್ಷರಶ್ಲೋಕಂ ಮತ್ತು ಕಾವ್ಯಕೇಳಿ ಮತ್ತು ಕವನಗಳನ್ನು ಕಲಿಯುವ ಅವಕಾಶ ಸಿಕ್ಕಿತು. ಅಜ್ಜನ ಮನೆಯಲ್ಲಿ ನಮಗೆ ಸಾಹಿತ್ಯ, ಒಗಟುಗಳಿಗೆ ಸಂಬಂಧಿಸಿದ ಏನಾದರೊಂದು ಕೆಲಸ ಕೊಡುತ್ತಿದ್ದರು. ಅಲ್ಲಿ ನಿರಂತರವಾಗಿ ನಡೆಯುತ್ತಿದ್ದ